ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016–17 ಮತ್ತು 2017–18ನೇ ಸಾಲಿನ "ನವ ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಮತ್ತು ಸರೋವರ ಅಭಿವೃದ್ಧಿ" ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿರುವ "Construction of CC drains and Development works in ward no-01 & 02 of Yelahanka Sub division. (Package No-01)" ಕಾಮಗಾರಿಯ ರೂ.6.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಮುಖ್ಯ ಅಭಿಯಂತರರ ಕಛೇರಿ
13 MAY 2020
42
ಬಿ.ಬಿ.ಎಂ.ಪಿ,ಯಲಹಂಕ ವಲಯ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ–1), ದಿನಾಂಕ: 21–06–2016.
2. ಸರ್ಕಾರದ ಆದೇಶ ಸಂಖ್ಯೆ: ನಅಇ 36 ಎಂಎನ್‌ವೈ 2019, ದಿನಾಂಕ: 13–02–2019.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್(ಜಿ)/5945/2019–20, ದಿನಾಂಕ: 05–12–2019.
4. ದಿನಾಂಕ: 04–01–2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

Special Commissioner (Project)
ವಿಶೇಷ ಆಯುಕ್ತರು
ಬಿ.ಬಿ.ಎಂ.ಪಿ.
ದಿನಾಂಕ 2646
ಸಂ: 21/3/2020
(ಯೋಜನೆ)

* * * * *

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 21–06–2016ರ ಆದೇಶದಲ್ಲಿ, ಅನುಬಂಧ–6ರ ಕ್ರಮ ಸಂಖ್ಯೆ–1 ರಲ್ಲಿ 1. Repairs and development works in Krishnarajendra market-Mutton market Chamarajapete Constituency ಕಾಮಗಾರಿಗೆ ರೂ 700.00 ಲಕ್ಷಗಳನ್ನು, ಕ್ರಮ ಸಂಖ್ಯೆ–02ರ Repairs and development works in Russel market- Mutton market Shivajinagara Constituency ಕಾಮಗಾರಿಗೆ ರೂ.400.00 ಲಕ್ಷಗಳನ್ನು ಹಾಗೂ ಕ್ರಮ ಸಂಖ್ಯೆ–03ರ Repairs and development works in Johnson Market in Shanthinagara Constituency ಕಾಮಗಾರಿಗೆ ರೂ.400.00 ಲಕ್ಷಗಳನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 13–02–2019ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ–2016 (ಭಾಗ–1), ದಿನಾಂಕ: 21–01–2016ರ ಕ್ರಿಯಾ ಯೋಜನೆಯ ಅನುಬಂಧ–6ರ ಕ್ರಮ ಸಂಖ್ಯೆ (1) ರಲ್ಲಿ Repairs and development works in Krishnarajendra market-Mutton market Chamarajapete Constituency ಕಾಮಗಾರಿಗೆ ರೂ 700.00 ಲಕ್ಷಗಳನ್ನು, (2) ರಲ್ಲಿ Repairs and development works in Russel market-Mutton market Shivajinagara Constituency ಕಾಮಗಾರಿಗೆ ರೂ.400.00 ಲಕ್ಷಗಳನ್ನು ಹಾಗೂ (3) ರಲ್ಲಿ Repairs and development works in Johnson Market in

JC (Yelahanka)

ಮುಖ್ಯ ಅಭಿಯಂತರರು
ಸಂ: 24
ದಿನಾಂಕ: 13-5-2020

...2/-

Shanthinagara Constituency ಕಾಮಗಾರಿಗೆ ರೂ.400.00 ಲಕ್ಷಗಳ ಅನುದಾನದಲ್ಲಿ ಮಂಜೂರಾಗಿರುವ ಕಾಮಗಾರಿಯ ಬದಲಾಗಿ, ಅದೇ ಮೊತ್ತದಲ್ಲಿ ಯಲಹಂಕ ವಲಯದ ವಾರ್ಡ್–1ರ Construction of CC drain and development works in ward no-01 ಕಾಮಗಾರಿಗೆ ರೂ. 3.00 ಕೋಟಿಗಳನ್ನು ಮತ್ತು Construction of CC drain and development works in ward No-02 ಕಾಮಗಾರಿಗೆ ರೂ. 3.00 ಕೋಟಿಗಳನ್ನು ಹೀಗೆ ಒಟ್ಟು ರೂ. 6.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 03–01–2020ರ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು 2016–17 ಮತ್ತು 2017–18ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಯೋಜನೆ, "ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ" ಯೋಜನೆಯಡಿ ಒದಗಿಸಿರುವ ರೂ 7300.00 ಕೋಟಿಗಳ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್ಎಫ್ಸಿ–2016 (ಭಾಗ–1), ದಿನಾಂಕ: 21–01–2016 ಅನುಬಂಧ–6 ಕ್ರಮ ಸಂಖ್ಯೆ–1 ರಲ್ಲಿ 1. Repairs and development works in Krishna rajendra market mutton market Chamarajapete Constituency ಕಾಮಗಾರಿ ರೂ 700.00 ಲಕ್ಷಗಳನ್ನು 2.Repairs and development works in russel market mutton market Shivajinnagara Constituency ಕಾಮಗಾರಿ ರೂ.400.00 ಲಕ್ಷಗಳನ್ನು 3. Repairs and development works in Johnson Market in Shanthinagara constituency ಕಾಮಗಾರಿಗೆ ರೂ.400.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ಕೇಂದ್ರ ಸರ್ಕಾರದ ಸ್ಮಾರ್ಟ್ಸಿಟಿ ಯೋಜನಾ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವುದರಿಂದ ಬದಲಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶದ ಸಂಖ್ಯೆ: ನಅಇ199 ಎಸ್ಎಫ್ಸಿ–2016 ಭಾಗ–1 ದಿನಾಂಕ: 21–06–2016ರಂತೆ ಅನುಬಂಧ–6 ರ ಕ್ರಮ ಸಂಖ್ಯೆ 1, 2 ಮತ್ತು 3ರಲ್ಲಿ ಮೇಲ್ಕಂಡ ಕಾಮಗಾರಿಗಳ ಬದಲಾಗಿ, ಸರ್ಕಾರದ ಆದೇಶ ಸಂಖ್ಯೆ: ನಅಇ 36 ಎಂ.ಎನ್.ವೈ 2019, ದಿನಾಂಕ: 13–02–2019ರಲ್ಲಿ, ಯಲಹಂಕ ವಲಯದ ವಾರ್ಡ್–1 ಮತ್ತು 2ರಲ್ಲಿ ಬದಲಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಈ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಯ ಕ್ರಮ ಸಂಖ್ಯೆ: 01 ರ ಕಾಮಗಾರಿಯಾದ "Construction of CC drain and development works in ward no-01" ಕಾಮಗಾರಿಯ ಅಂದಾಜು ವೆಚ್ಚ ರೂ.300.00 ಲಕ್ಷಗಳು ಹಾಗೂ ಕ್ರಮ ಸಂ: 02 ರ ಕಾಮಗಾರಿಯಾದ "Construction of CC drain and development works in ward No-02" ಕಾಮಗಾರಿಯ ರೂ.300.00 ಲಕ್ಷಗಳ ಮೊತ್ತಕ್ಕೆ ಅನುಮೋದನೆ ನೀಡಲಾಗಿರುತ್ತದೆ.

ಆದುದರಿಂದ, ಮೇಲ್ಕಂಡ ಕ್ರ. ಸಂ.01 ಮತ್ತು 02ರ ಕಾಮಗಾರಿಗಳನ್ನು ಒಟ್ಟುಗೂಡಿಸಿ "Construction of CC drain and development works in ward no 01 & 02 Package No-01" ಎಂಬ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಸಂಖ್ಯೆ: BBMP/YNK.D/EE/E-Pmt/02/ 2019-20, Date: 14-05-2019 ರಂತೆ ದ್ವಿಲಕೋಟೆ ಇ–ಪ್ರೊಕ್ಯೂರ್ಮೆಂಟ್ ಪದ್ಧತಿಯಂತೆ ರೂ.526.24 ಲಕ್ಷಗಳಿಗೆ (ಟೆಂಡರ್ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ತಾಂತ್ರಿಕ ಬಿಡ್ನ್ನು ದಿನಾಂಕ:17–06–2019 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ವಿವರ ಕೆಳಕಂಡಂತಿರುತ್ತದೆ.

...3/-

1. M/s Sathya Construction (Sri Rajeshwaran Satheesh)- ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.
2. Sri BB Umesh - ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ.
3. M/s Benaka Automachines Pvt Ltd - ತಾಂತ್ರಿಕವಾಗಿ ಅನರ್ಹರಾಗಿರುತ್ತಾರೆ.

ಬಿಡ್‌ದಾರರಾದ M/s Sathya Construction (Sri Rajeshwaran Satheesh) ಮತ್ತು Sri B.B Umesh ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ, ದಿನಾಂಕ: 23-10-2019. ರಂದು ಆಯುಕ್ತರ ಅಧ್ಯಕ್ಷತೆಯಲ್ಲಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯು ತಾಂತ್ರಿಕ ಬಿಡ್‌ಗೆ ಅನುಮೋದನೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿದ್ದು, ಅದರಂತೆ, ದಿನಾಂಕ 07-11-2019ರಂದು ತೆರೆಯಲಾಗಿರುತ್ತದೆ. ವಿವರಗಳು ಈ ರೀತಿ ಇರುತ್ತದೆಂದು ಆಯುಕ್ತರು ತಿಳಿಸಿರುತ್ತಾರೆ.

ಕ್ರ. ಸಂ.	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ (ರೂಗಳಲ್ಲಿ)	ಪ್ರಸ್ತುತ 2018-19 ನೇ ಸಾಲಿನ (ಪರಿಷ್ಕೃತ ದರಗಳಿಗೆ) ಹೋಲಿಸಿದಾಗ ದಿ: 21-10-2019.	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ	ಪ್ರಸ್ತುತ 2018-19 ನೇ ಸಾಲಿನ (ಪರಿಷ್ಕೃತ ದರಗಳಿಗೆ) ಹೋಲಿಸಿದಾಗ ದಿ: 21-10-2019.
1	M/s Sathya Construction (Sri Rajeshwaran Satheesh)	600.00	52624000.00	53446682.00	58938869.00	(+)12.00%	(+) 10.28%
2	Sri BB Umesh				60480949.00	(+)14.93%	(+)13.16%

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ M/s Sathya Construction (Sri Rajeshwaran Satheesh) ರವರು ರೂ. **58938869.00** ಗಳನ್ನು ನಮೂದಿಸಿದ್ದು, ಲೋಕೋಪಯೋಗಿ ಇಲಾಖೆಯ 2018-19ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ +12.00 % ರಷ್ಟು ಹಾಗೂ ದಿನಾಂಕ: 21-10-2019ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ +10.28% ಹೆಚ್ಚಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ (ರೂಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತವನ್ನು ಪ್ರಸ್ತುತ 2019-20 ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ	2019-20 ನೇ ಸಾಲಿನ ಪರಿಷ್ಕೃತ ದರಗಳಿಗೆ ಹೋಲಿಸಿದಾಗ	ದರ ಸಂಧಾನದ ನಂತರ ಗುತ್ತಿಗೆದಾರರು ಒಪ್ಪಿರುವ ಮೊತ್ತ (ಪರಿಷ್ಕೃತ ದರಗಳಿಗೆ ಹೋಲಿಸಿದಾಗ)
1	M/s Sathya Construction (Sri Rajeshwaran Satheesh)	600.00	526.24	53446682.00	58938869.00	(+)12.00%	(+)10.28%	56119016.00 (+5.00%)

...4/-

ಮೇಲ್ಕಂಡ ವಿವರಗಳಂತೆ, ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿದ ನಂತರ ರೂ.5,61,19,016.00ಗಳಾಗಿದ್ದು, ಪರಿಷ್ಕೃತ ದರಗಳಿಗೆ ಹೊಲಿಸಿದಾಗ ಶೇ.+5.00% ರಷ್ಟು ಹೆಚ್ಚುವರಿ ಯಾಗಿರುತ್ತೆ ಹಾಗೂ ದಿನಾಂಕ. 03-12-2019 ರಂದು ನಡೆದ ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ಸಭೆಯಲ್ಲಿ ರೂ.5,61,19,016.00 ಗಳಿಗೆ ಟೆಂಡರ್ ಅನುಮೋದಿಸಲು ಶಿಫಾರಸ್ಸು ಮಾಡಲಾಗಿರುತ್ತದೆ. ಆದುದರಿಂದ ಮೇಲ್ಕಂಡ ಕಾಮಗಾರಿಯನ್ನು ವಾರ್ಡ್ ನಂ-01 ಮತ್ತು 02ರಲ್ಲಿ ವ್ಯಾಪ್ತಿಯಲ್ಲಿ ಕೈಗೊಂಡು ನಿರ್ವಹಿಸಬೇಕಾಗಿರುವುದರಿಂದ ರೂ.6.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತದ ಟೆಂಡರ್‌ದಾರರಾದ M/s Sathya Construction (Sri Rajeshwaran Satheesh) ರವರ ಟೆಂಡರ್‌ನ ಮೊತ್ತ ರೂ. 5,61,19,016.00 ಗಳ ಹೆಚ್ಚುವರಿ ದರಗಳಿಗೆ (ಶೇಕಡ+5.00%) ಟೆಂಡರ್‌ಗೆ ಅನುಮೋದನೆ ನೀಡುವಂತೆ ಬಿಬಿಎಂಪಿ ಆಯುಕ್ತರು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 04-01-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 03-01-2020ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ M/s Sathya Construction (Sri Rajeshwaran Satheesh)ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.5,26,24,000/- ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ ರೂ.5,52,55,200/- ಗಳ ಸಂಧಾನಿತ ಮೊತ್ತಕ್ಕೆ ಮಿತಿಗೊಳಿಸಿ (ಅನ್ವಯವಾಗುವ ಎಲ್ಲ ಟ್ಯಾಕ್ ಒಳಗೊಂಡಂತೆ) ಅನುಮೋದಿಸಲು ಮತ್ತು ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರುಟೆಂಡರ್ ಕರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು."

ದಿನಾಂಕ: 04-01-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 01 ಎಂಎನ್‌ವೈ 2020,
ಬೆಂಗಳೂರು, ದಿನಾಂಕ: 06-03-2020.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 36 ಎಂ.ಎನ್.ವೈ 2019 ದಿನಾಂಕ: 13-02-2019ರಲ್ಲಿನ ಕ್ರಮ ಸಂಖ್ಯೆ: 01 ಮತ್ತು 02 ರ "Construction of CC drains and Development works in ward no-01 & 02 of Yelahanka Sub division. (Package No-01)" ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 04-01-2020 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ ಎಲ್-1 ಗುತ್ತಿಗೆದಾರರಾದ M/s Sathya Construction (Sri Rajeshwaran Satheesh)ರವರ ಬಿಡ್ಡನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.5,26,24,000/- ಗಳಿಗೆ ಹೋಲಿಸಿದಾಗ 5% ಅಧಿಕ ಅಂದರೆ ರೂ.5,52,55,200/- (ಐದು ಕೋಟಿ ಐವತ್ತೆರಡು ಲಕ್ಷದ ಐವತ್ತೈದು ಸಾವಿರದ ಎರಡುನೂರು ರೂಪಾಯಿಗಳು ಮಾತ್ರ) ಗಳ ಸಂಧಾನಿತ ಮೊತ್ತಕ್ಕೆ ಮಿತಿಗೊಳಿಸಿ (ಅನ್ವಯವಾಗುವ ಎಲ್ಲ ಟ್ಯಾಕ್ ಒಳಗೊಂಡಂತೆ) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಅನುಮೋದನೆಯನ್ನು ನೀಡಿದೆ.

ಷರತ್ತುಗಳು:

1. ಕಾಮಗಾರಿಗಳಿಗೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.

...5/-

2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ/ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ199 ಎಸ್‌ಎಫ್‌ಸಿ–2016 ಭಾಗ–I, ದಿನಾಂಕ: 21–06–2016 ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 36 ಎಂ.ಎನ್.ವೈ 2019, ದಿನಾಂಕ: 13–02–2019ರ ಅನುದಾನದಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
5. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
6. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 04–01–2020ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಲಕ್ಷ್ಮೀ ಸಾಗರ್ ಎಸ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)
06/03

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಗಳು–3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.